# ಸಿಡ್ನಿ ಕನ್ನಡ ಸಂಘದ 41 ನೇ ವಾರ್ಷಿಕೋತ್ಸವ

www.kannada.org.au

ವರದಿ - ದೀಪಿಕಾ ಜೈಕುಮಾರ್

ನಮ್ಮ ಕರ್ನಾಟಕದ ನುಡಿ, ಸಂಸ್ಕೃತಿ ಮತ್ತು ಪರಂಪರೆಯನ್ನು ಹಲವು ವರುಷಗಳಿಂದ ಯಶಸ್ವಿಯಾಗಿ ಮುಂದುವರೆಸಿಕೊಂಡು ಬರುತ್ತಿರುವ ಸಿಡ್ನಿ ಕನ್ನಡ ಸಂಘವು ಜುಲೈ ಒಂದರಂದು ತನ್ನ 41 ನೇ ವಾರ್ಷಿಕೋತ್ಸವವನ್ನು ಬೀಕ್ರಾಫ್ಟ್ ನ ರೋಜ್ಲೀ ಸಮುದಾಯ ಭವನದಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಿಕೊಂಡಿತು. ಸಿಡ್ನಿ ಕನ್ನಡ ಸಂಘದ ವತಿಯಿಂದ ವಾರ್ಷಿಕೋತ್ಸವದ ಪ್ರಯುಕ್ತ ಹಾಸ್ಯ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು, ಈ ಕಾರ್ಯಕ್ರಮಕ್ಕೆ ಜನಪ್ರಿಯ ಗಾಯಕರಾದ ಶ್ರೀಮತಿ. ಶಶಿಕಲಾ ಸುನಿಲ್ ಮತ್ತು ಜನಪ್ರಿಯ ಹಾಸ್ಯ ಕಲಾವಿದರಾದ ಶ್ರೀಯುತ ರಾಘವೇಂದ್ರ ಆಚಾರ್ಯರವರು ಬೆಂಗಳೂರಿನಿಂದ ಅತಿಥಿಗಳಾಗಿ ಬಂದಿದ್ದರು.






ಕಾರ್ಯಕ್ರಮದ ನಿರೂಪಕಿ ಶ್ರೀಮತಿ. ದೀಪಿಕಾರವರು ಪ್ರೇಕ್ಷಕರಿಗೆ ಸ್ವಾಗತ ಕೋರುತ್ತಾ ಅಥಿತಿಗಳನ್ನು ಗೌರವದಿಂದ ವೇದಿಕೆಗೆ ಕನ್ನಡದ ಜ್ಯೋತಿಯನ್ನು ಬೆಳಗಲು ಆಹ್ವಾನಿಸಿದರು.

ಈ ಕಾರ್ಯಕ್ರಮದಲ್ಲಿ ಅತಿಥಿಗಳಾದ ಶ್ರೀಮತಿ. ಶಶಿಕಲಾ ಸುನಿಲ್ , ಶ್ರೀಯುತ ರಾಘವೇಂದ್ರ ಆಚಾರ್ಯ, ಶ್ರೀಯುತ ಓಂಕಾರಸ್ವಾಮಿ ,ಶ್ರೀಯುತ ವಿಜಯಕುಮಾರ್ ಹಲಗಲಿ, ಅಧ್ಯಕ್ಷೆ ಶ್ರೀಮತಿ ನಂದಾ ಶಿರೋಳ್ , ಉಪಾಧ್ಯಕ್ಷೆ  ಶ್ರೀಮತಿ ಭಾಗ್ಯ ಶಂಕರ್ ಮತ್ತು ಕಾರ್ಯದರ್ಶಿ ಶ್ರೀಮತಿ ವೇದ ದೇಸಾಯಿ ವೇದಿಕೆಗೆ ಬಂದು ಕನ್ನಡದ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸುವ ಸಂಧರ್ಭದಲ್ಲಿ ಇಂಪನಾ ತಂಡದವರು “ಹಚ್ಚೇವು ಕನ್ನಡದ ದೀಪ” ನಾಡ ಗೀತೆಯನ್ನು ಇಂಪಾಗಿ ಹಾಡಿದರು.

ಮುಂದಿನ ಕಾರ್ಯಕ್ರಮದಲ್ಲಿ ಗಣೇಶನ ಸ್ತುತಿಗೆ ನಿಹಾರಿಕಾ ಮತ್ತು ಸ್ಮಿತಾರವರು ಸುಂದರವಾಗಿ ಭರತನಾಟ್ಯವನ್ನು ಪ್ರದರ್ಶಿಸಿದರು.

ಸಿಡ್ನಿ ಕನ್ನಡ ಸಂಘದ ಅಧ್ಯಕ್ಷೆ ಶ್ರೀಮತಿ ನಂದಾ  ಶಿರೋಳ್ ವರು ಸಂಘದ ವತಿಯಿಂದ ನೆರೆದಿದ್ದ ಸಭಿಕರಿಗೆ ಮತ್ತು ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರಿಗೆ ಸ್ವಾಗತ ಕೋರಿದರು.







ಸಂಗೀತ ಕಾರ್ಯಕ್ರಮವನ್ನು ಆರಂಭಮಾಡಲು ಸಿಡ್ನಿ ಕನ್ನಡ ಸಂಘದ ಉಪ ಖಜಾಂಚಿಗಳಾದ

ಗಳಾದ ಶ್ರೀಯುತ ಮಹಾಂತೇಶ್ ಗದ್ದಿರವರು ಶ್ರೀಮತಿ ಶಶಿಕಲಾ ಸುನಿಲ್ ರವರ ಹಿನ್ನೆಲೆ ಮತ್ತು ಸಾಧನೆಯನ್ನು ಪ್ರೇಕ್ಷಕರಿಗೆ ಪರಿಚಯಿಸಿ ವೇದಿಕೆಗೆ ಸ್ವಾಗತಕೋರಿದರು.







ವೇದಿಕೆಗೆ ಆಗಮಿಸಿದ ಶ್ರೀಮತಿ ಶಶಿಕಲಾ ಸುನಿಲ್ ರವರು ತಮ್ಮ ಅಮೋಘ ಗಾಯನದ ಮೂಲಕ ಪ್ರೇಕ್ಷಕರನ್ನು ತನ್ಮಯಗೊಳಿಸಿದರು. ನಂತರದಲ್ಲಿ ಸಿಡ್ನಿಯ ಸ್ಥಳೀಯ ಕಾಲಾವಿದರಾದ "ಕನ್ನಡಿಗರು ನಾವು" ತಂಡವು ಕನ್ನಡ ಚಲನಚಿತ್ರ ಗೀತೆಗಳಿಗೆ ಅತ್ಯುತ್ತಮವಾಗಿ ನೃತ್ಯ ಪ್ರದರ್ಶನ ಮಾಡಿದರು.






ಹಾಸ್ಯ ಕಾರ್ಯಕ್ರಮವನ್ನು ಆರಂಭ ಮಾಡಲು ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷೆ ಶ್ರೀಮತಿ ಭಾಗ್ಯ ಶಂಕರ್ ರವರು  ಶ್ರೀಯುತ ರಾಘವೇಂದ್ರ ಆಚಾರ್ಯರವರ ಪ್ರತಿಭೆಯನ್ನು ಕಾವ್ಯಮಯವಾಗಿ ವರ್ಣಿಸಿ ವೇದಿಕೆಗೆ ಸ್ವಾಗತ ಕೋರಿದರು.

ವೇದಿಕೆಗೆ ಬಂದ ಉತ್ತರ ಕರ್ನಾಟಕದ ಪ್ರತಿಭೆಯಾದ ಶ್ರೀಯುತ ರಾಘವೇಂದ್ರ ಆಚಾರ್ಯರವರು ತಮ್ಮ ಹಾಸ್ಯದಿಂದ ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗುವಷ್ಟು ನಗುವಂತೆ ಮಾಡಿದರು.





ನಂತರದಲ್ಲಿ ಸಿಡ್ನಿ ಕನ್ನಡ ಸಂಘದ ವಾರ್ಷಿಕೋತ್ಸವಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಪ್ಯಾರಾಮಟ್ಟಾ ನಗರ ಸಭೆಗೆ ಮೇಯರ್ ಆಗಿ ಆಯ್ಕೆಯಾದ ಪ್ರಪ್ರಥಮ ಭಾರತೀಯ ಶ್ರೀಯುತ

ಸಮೀರ್ ಪಾಂಡೆ, ಆಸ್ಟ್ರೇಲಿಯಾ ಸರ್ಕಾರ ನೀಡುವ ಆರ್ಡರ್ ಆಫ್ ಆಸ್ಟ್ರೇಲಿಯಾ ಪುರಸ್ಕಾರಕ್ಕೆ ಭಾಜನರಾದ ಕ್ಯಾನ್ಬೆರ್ರಾ ನಿವಾಸಿ ಶ್ರೀ. ಅರುಣ್ ವೆಂಕಟೇಶ, OAM, ಕ್ವೀನ್ಸ್ಲ್ಯಾಂಡ್ ಕನ್ನಡ ಸಂಘದ ಅಧ್ಯಕ್ಷೆ ಸೌಮ್ಯ ಗೌಡ, ಗಾಯಕರಾದ ಶ್ರೀಮತಿ ಶಶಿಕಲಾ ಸುನಿಲ್, ಹಾಸ್ಯ ಕಲಾವಿದರಾದ ಶ್ರೀಯುತ ರಾಘವೇಂದ್ರ ಆಚಾರ್ಯರನ್ನೂ ಸಿಡ್ನಿ ಕನ್ನಡ ಸಂಘದ ಕಾರ್ಯಕಾರಿ ಸಮಿತಿಯ ಪರವಾಗಿ ಸನ್ಮಾನಿಸಲಾಯಿತು.

ಊಟದ ಸಮಯದಲ್ಲಿ ಇಂಪನಾ ತಂಡದ ಕಲಾವಿದರು ಮಿಶ್ರ ಚಲನಚಿತ್ರ ಗೀತೆಗಳನ್ನು ಹಾಡುತ್ತಾ ಸಭಿಕರನ್ನು ರಂಜಿಸಿದರು.

ವಿರಾಮದ ನಂತರ ವೇದಿಕೆಗೆ ಇನ್ನೊಮ್ಮೆ ಆಗಮಿಸಿದ ಗಾಯಕರಾದ ಶ್ರೀಮತಿ ಶಶಿಕಲಾ ಸುನಿಲ್ ರವರು ಮತ್ತು ಹಾಸ್ಯ ಕಲಾವಿದರಾದ ಶ್ರೀಯುತ ರಾಘವೇಂದ್ರ ಆಚಾರ್ಯರವರು ನೆರೆದಿದ್ದ ಪ್ರೇಕ್ಷಕರನ್ನು ತಮ್ಮ ಪ್ರತಿಭೆಯ ಮೂಲಕ ಮನಸೂರೆಗೊಂಡರು.

ಸಿಡ್ನಿ ಕನ್ನಡ ಸಂಘದ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಿದ್ದ ಸಂಗೀತ ಮತ್ತು ಹಾಸ್ಯ ಕಾರ್ಯಕ್ರಮವನ್ನು ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷೆ ಶ್ರೀಮತಿ ಭಾಗ್ಯ ಶಂಕರ್ ರವರು ಅತಿಥಿಗಳಿಗೆ, ಪ್ರಾಯೋಜಕರಿಗೆ, ಕಲಾವಿದರಿಗೆ ಮತ್ತು ಪ್ರೇಕ್ಷಕರಿಗೆ ಸಂಘದ ವತಿಯಿಂದ ವಂದನೆಗಳನ್ನು ಸಲ್ಲಿಸಿದರು. ವಾರ್ಷಿಕೋತ್ಸವ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ದೀಪಿಕಾ ಜೈಕುಮಾರ್ ರವರು ಅಚ್ಚುಕಟ್ಟಾಗಿ ಮಾಡಿದರು.

ಸಿಡ್ನಿ ಕನ್ನಡದ ಸಂಘದ ವಾರ್ಷಿಕೋತ್ಸವಕ್ಕೆ ಮೈಸೂರು ಸವಿರುಚಿ ತಂಡದವರು ಕರ್ನಾಟಕದ ಸವಿಯಾದ ತಿನಿಸುಗಳನ್ನು ಮತ್ತು ಪಾನಿಯವನ್ನು ಉಣಬಡಿಸಿದರು.ಕಾರ್ಯಕ್ರಮದ ಅಂತಿಮದಲ್ಲಿ ಗಾಯಕರಾದ ಶ್ರೀಮತಿ ಶಶಿಕಲಾ ಸುನಿ ರವರು ಭಾರತದ ರಾಷ್ಟ್ರಗೀತೆಯನ್ನು

ಸುಶ್ರಾವ್ಯವಾಗಿ ಹಾಡುವ ಮೂಲಕ ಸಿಡ್ನಿ ಕನ್ನಡದ ಸಂಘದ 41 ನೇ ವಾರ್ಷಿಕೋತ್ಸವ ಸಮಾರಂಭವು ಮುಕ್ತಾಯವಾಯಿತು.

**ಛಾಯಾಚಿತ್ರಗಳು: ಶ್ರೀ ಅನಂತನಾಗ್ ಭಟ್**



| | |
|---|---|
| | |

[www.kannada.org.au](http://www.kannada.org.au)